10) ಈ ಆಸ್ಪತ್ರೆಗೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಈಗಾಗಲೇ ಔಷಧಿ ಮತ್ತು ರಾಸಾಯನಿಕಕ್ಕಾಗಿ ಹಣ ಎಂದಿನಂತೆ ಒದಗಿಸಿದೆ.

ಆ) 1992-93ನೇ ಸಾಲಿನಲ್ಲಿ ಆಸ್ಪತ್ರೆಯಲ್ಲಿ ಅಭಿವೃದ್ಧಿಗಾಗಿ ಸರ್ಕಾರವು ರೂ. 45.74,465.00 ಹಣವನ್ನು ಬಿಡುಗಡೆ ಮಾಡಿದೆ.

**ರಾಜ್ಯದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆ**

947 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯ ಸರ್ಕಾರದ ಅಧೀನದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಸಂಖ್ಯೆಯೆಷ್ಟು?*

*ಆ) ಈ ಉದ್ದಿಮೆಗಳಲ್ಲಿ ಹೂಡಿರುವ ಬಂಡವಾಳವೆಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1991-92ನೇ ಸಾಲಿನಲ್ಲಿ 68 ಉದ್ದಿಮೆಗಳಲ್ಲಿ ಮಹೋದ್ಯಮದ ವ್ಯಾಪ್ತಿಯಲ್ಲಿ ಇವೆ.

ಆ) 1990-91ರಲ್ಲಿ ಮಹೋದ್ಯಮದ ವ್ಯಾಪ್ತಿಯಲ್ಲಿ ಇದ್ದ 61 ಉದ್ದಿಮೆಗಳು ಹೂಡಿರುವ ಒಟ್ಟು ಬಂಡವಾಳ 451303.97 ಲಕ್ಷ ರೂಪಾಯಿಗಳು.

**ಹಣಕಾಸು ನಿಗಮದಿಂದ ಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಬಿಡುಗಡೆಯಾದ ಸಾಲದ ಮೊತ್ತ**

948 - ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯದ ಹಣಕಾಸು ನಿಗಮದಿಂದ ಕೈಗಾರಿಕೆಗಳ ಅಭಿವೃದ್ಧಿಗಾಗಿ 1992-93ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಾಲದ ಮೊತ್ತವೆಷ್ಟು?*

*ಆ) ಇದರಲ್ಲಿ ಯಾವ ಯಾವ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ?*

*ಇ) ಸಾಲವನ್ನು ಪಡೆದಿರುವ ಕೈಗಾರಿಕೆಗಳಿಂದ ಬರಬೇಕಾಗಿರುವ ಬಾಕಿ ಹಣವೆಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) 1992-93ನೇ ಸಾಲಿನಲ್ಲಿ ಏಪ್ರಿಲ್ 1992ರಿಂದ ಸೆಪ್ಟೆಂಬರ್ 1992ರ ವರೆವಿಗೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಬಿಡುಗಡೆ ಮಾಡಿರುವ ಸಾಲದ ಮೊತ್ತ ರೂ. 136.19 ಕೋಟಿಗಳು.

ಆ) ಸಂಸ್ಥೆಯ ಧ್ಯೇಯೋದ್ದೇಶಕ್ಕೆ ಅನುಗುಣವಾಗಿ, ಅತೀ ಸಣ್ಣ ಕುಶಲ ಕರ್ಮಿ, ಗುಡಿ ಕೈಗಾರಿಕೆಗಳು ಮತ್ತು ಸಣ್ಣ ಕೈಗಾರಿಕೆಗಳಿಗೆ ಆದ್ಯತೆ ನೀಡಲಾಗಿದೆ.

ಇ) ಸಂಸ್ಥೆಯು ಸ್ಥಾಪನೆಯಾದಾಗಿನಿಂದ ದಿನಾಂಕ 30-9-1992ರ ವರೆಗೆ 222.46 ಕೋಟಿ ರೂಪಾಯಿಗಳು ಸುಸ್ತಿ ಬಾಕಿಯಾಗಿದೆ.

**ರಾಜ್ಯದಲ್ಲಿರುವ ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ**

21 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕರ್ನಾಟಕ ರಾಜ್ಯದಲ್ಲಿರುವ ಐ.ಎ.ಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು?*

*ಆ) ಇವರಲ್ಲಿ ನೇರವಾಗಿ ನೇಮಕಾತಿಯಾದವರ ಸಂಖ್ಯೆ ಎಷ್ಟು ಮತ್ತು ಬಡ್ತಿ ಮೂಲಕ ನೇಮಕವಾದವರ ಸಂಖ್ಯೆ ಎಷ್ಟು?*